ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 72-79
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ರಚನೆ ಮತ್ತು ಕಾರ್ಯಗಳು : ಒಂದು ಪಕ್ಷಿನೋಟ

**ಮಂಗಳಮ್ಮ ಎಸ್**
ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಯಾವುದೇ ನಗರವಾಗಲಿ ಅದು ತನ್ನ ಜನರ ಹಿತಾದೃಷ್ಟಿಯಿಂದ ನಗರವನ್ನು ಯೋಜನಬದ್ಧವಾಗಿ ಅಭಿವೃದ್ಧಿಗೊಳಿಸಬೇಕಾಗುತ್ತದೆ. ವ್ಯವಸ್ಥಿತವಾದ ವಸತಿ ಸೌಲಭ್ಯ, ಉತ್ತಮವಾದ – ವಿಸ್ತಾರವಾದ ರಸ್ತೆಗಳು, ಉದ್ಯಾನವನಗಳು, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಪಾರ್ಕಿಂಗ್ ಸೌಲಭ್ಯ ಮತ್ತು ಗಿಡಮರಗಳನ್ನು ಬೆಳೆಸುವುದರ ಮೂಲಕ ನಾಗರಿಕರಿಗೆ ಯೋಜಿತ ಮೂಲಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಯೋಜನೆಯನ್ನು ರೂಪಿಸುವವರು ಅಥವಾ ವಿನ್ಯಾಸಗೊಳಿಸುವವರು ಪ್ರಸ್ತುತ ಮತ್ತು ಮುಂದಿನ ಭವಿಷ್ಯತ್ತನ್ನು ಗಮನದಲ್ಲಿಟ್ಟುಕೊಂಡು ಸುಸ್ಥಿರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಪ್ರಸ್ತುತ ಲೇಖನವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚನೆ, ಕಾರ್ಯಶೈಲಿ, ಚಟುವಟಿಕೆಗಳು ಮತ್ತು ಮೈಸೂರು ನಗರದ ವ್ಯವಸ್ಥಿತ ಅಭಿವೃದ್ಧಿಯಲ್ಲಿ ಅದರ ಪಾತ್ರವನ್ನು ಅವಲೋಕಿಸುವ ಮೂಲ ಉದ್ದೇಶವನ್ನು ಹೊಂದಿದೆ. ಈ ಅಧ್ಯಯನವು ಸಂಪೂರ್ಣವಾಗಿ ಅನುಷಂಗಿಕ ಮೂಲದ ದತ್ತಾಂಶಗಳನ್ನು ಒಳಗೊಂಡಿದ್ದು, ವಿವರಣಾತ್ಮಕ ಸ್ವರೂಪವನ್ನು ಹೊಂದಿದೆ.*

***Keywords:*** *ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮುಡಾ, ಯೋಜನೆ, ಅಭಿವೃದ್ಧಿ, ಮೂಲಭೂತ ಸೌಕರ್ಯ.*

**ಪೀಠಿಕೆ**

ಭಾರತದಲ್ಲಿ 1992ರ ಆರ್ಥಿಕ ಉದಾರೀಕರಣದ ನಂತರ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದಿದ ಕೈಗಾರೀಕಿಕರಣ ಮತ್ತು ವಾಣಿಜ್ಯ ಚಟುವಟಿಕೆಗಳ ಪರಿಣಾಮವಾಗಿ ನಗರ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಬೇಡಿಕೆಯ ಪ್ರಮಾಣ ಹೆಚ್ಚಿತು. ಈ ಪರಿಣಾಮದಿಂದಾಗಿ ನಗರ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಸಮರ್ಥ ಅನುಷ್ಠಾನ ಮತ್ತು ಲಭ್ಯವಿರುವ ಸಂಪನ್ಮೂಲಗಳ ಉತ್ತಮ ಬಳಕೆಯ ಮೂಲಕ ವಸತಿ, ರಸ್ತೆಗಳು, ಮೇಲ್ಸೇತುವೆಗಳು, ಮೆಟ್ರೋ ರೈಲು, ಸಾರಿಗೆ–ಸಂಪರ್ಕ ಮುಂತಾದವುಗಳನ್ನು ಕ್ರಿಯಾತ್ಮಕವಾಗಿ, ಅಗತ್ಯಗಳಿಗನುಗುಣವಾಗಿ ನಿರ್ಮಿಸಿ–ನಿರ್ವಹಿಸಲು ನಗರಾಬಿವೃದ್ಧಿ ಪ್ರಾಧಿಕಾರಗಳನ್ನು ಸ್ಥಾಪಿಸಲಾಯಿತು. ನಗರ ಪ್ರದೇಶಗಳಲ್ಲಿ ಯೋಜಿತ ಮೂಲಭೂತ ಸೌಕರ್ಯ ಮತ್ತು ವಸತಿ ಯೋಜನೆಗಳ ಅಭಿವೃದ್ಧಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದ್ದು, ಇವುಗಳು 'ಶಾಸನಬದ್ಧ ನಾಗರಿಕ ಸಂಸ್ಥೆಗಳು' ಸಹ ಆಗಿವೆ. ಈ ಮೂಲಕ ನಗರ ಯೋಜನೆ ಚಟುವಟಿಕೆಗಳ ವಿವಿಧ ಅಂಶಗಳಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳು ಮತ್ತು ವಿವಿಧ ಸಂಘ–ಸಂಸ್ಥೆಗಳ ಗುಂಪನ್ನು ಇವುಗಳು ಒಳಗೊಂಡಿರುತ್ತವೆ. ಆರ್ಥಿಕತೆ ಮತ್ತು ಬೆಳವಣಿಗೆ

***Please cite this article as:*** ಮಂಗಳಮ್ಮ ಎಸ್. (2023). ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ರಚನೆ ಮತ್ತು ಕಾರ್ಯಗಳು: ಒಂದು ಪಕ್ಷಿನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(5), 72–79.

ಒಂದಕ್ಕೊಂದು ಪೂರಕವಾಗಿದ್ದು, ಯೋಜನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಚತುರತೆಗೊಳಿಸುವ ಮೂಲಕ ತ್ವರಿತವಾಗಿ ಅಭಿವೃದ್ಧಿ ಯೋಜನೆಗಳನ್ನು ಅಥವಾ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರಧಾನ ಪ್ರಾಮುಖ್ಯತೆಯನ್ನು ವಹಿಸುತ್ತವೆ.

1992ರ 74ನೇ ಸಾಂವಿಧಾನಿಕ ತಿದ್ದುಪಡಿಯು ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳ ಮತ್ತು ಅವುಗಳ ಕಾರ್ಯಚಟುವಟಿಕೆ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಏಕರೂಪತೆಯನ್ನು ಹೊಂದಲು ಅನುವುಮಾಡಿಕೊಡುವ ಮೂಲಕ ಸಾಮಾನ್ಯ ಜನರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ತಳಮಟ್ಟದಿಂದ ಅಧಿಕ ಪ್ರಮಾಣದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಟ್ಟಿದೆ. ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳನ್ನು; ದೊಡ್ಡ ನಗರ ಸಂಸ್ಥೆಗಳು, ಸಣ್ಣ ನಗರ ಸಂಸ್ಥೆಗಳು ಹಾಗೂ ಪರಿವರ್ತನಾ ಪ್ರದೇಶಗಳು ಎಂದು ವರ್ಗೀಕರಿಸಲಾಗಿದೆ. ನಗರ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಸುಗಮಗೊಳಿಸಲು ರಾಜ್ಯದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲ್ಪಡುವ ಪ್ರತ್ಯೇಕ ಸಂಸ್ಥೆ ಇದ್ದು, ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತದೆ, ಹಾಗೂ ಮೂಲಭೂತ ನಾಗರಿಕ ಸೌಕರ್ಯಗಳನ್ನು ಸಹ ಒದಗಿಸುತ್ತದೆ. ಪ್ರಮುಖವಾಗಿ ವಿನ್ಯಾಸ [ಲೇಔಟ್] ಗಳ ರಚನೆ, ನಗರದ ದುರ್ಬಲ ವರ್ಗದವರಿಗೆ ಮನೆ–ನಿವೇಶನಗಳ ವಿತರಣೆ, ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯಗಳನ್ನು ಒದಗಿಸುವುದು ಮತ್ತು ಅಸ್ತಿತ್ವದಲ್ಲಿರುವ ನಾಗರೀಕ ಸೌಕರ್ಯಗಳನ್ನು ಸುಧಾರಿಸುವಂತಹ ಹಲವಾರು ಅಭಿವೃದ್ಧಿಪರ ಕಾರ್ಯಗಳನ್ನು ನಿರ್ವಹಿಸುತ್ತದೆ.

**ಉದ್ದೇಶಗಳು**

- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ರಚನೆ ಮತ್ತು ಕಾರ್ಯಚಟುಟಿಕೆಗಳ ಮೇಲೆ ಬೆಳಕು ಚೆಲ್ಲುವುದು.
- ಮೈಸೂರು ನಗರದ ಅಭಿವೃದ್ಧಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪಾತ್ರವನ್ನು ವಿಶ್ಲೇಷಿಸುವುದು.

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ:**

ಮೈಸೂರು ನಗರವನ್ನು 19ನೇ ಶತಮಾನದ ಪ್ರಾರಂಭದಿಂದಲೂ ಆಗಿನ ಯೋಜನಕಾರರು, ಇಂಜಿನಿಯರ್‌ಗಳು ಮತ್ತು ಆಡಳಿತಗಾರರು **'ನಗರ ಪುನರುಜ್ಜೀವನ'** ಎಂಬ ಹೊಸ ಘೋಷಣೆಯನ್ನು ನಿರಂತರವಾಗಿ ಅನುಸರಿಸಿ ಕಾರ್ಯರೂಪಕ್ಕೆ ತರುವ ಪ್ರಯತ್ನಗಳಿಂದಾಗಿ ಇಂದಿನ ಮೈಸೂರು ನಗರವು ರಚನೆಯಾಗಿದೆ. ಒಂದು ಚಿಕ್ಕ ಹಾಗೂ ಜನನಿಬಿಡವಾದ ಹಳೆಯ ಪಟ್ಟಣವು ನಗರ ಯೋಜನೆ, ಅಭಿವೃದ್ಧಿ ಹಾಗೂ ಪುನರಾಭಿವೃದ್ಧಿ ನೀತಿಯನ್ನು ಅನುಸರಿಸುವ ಮೂಲಕ ಸುಂದರ, ಸ್ವಚ್ಛ, ಪಾರಂಪರಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ನಗರವಾಗಿ ಪರಿವರ್ತನೆಗೊಂಡು, ಯೋಜನಾಬದ್ಧ ಬೆಳವಣಿಗೆ ಹೊಂದುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಮೈಸೂರು ನಗರ ಇಂದಿಗೂ ತನ್ನ ವೈಭವವನ್ನು ಉಳಿಸಿಕೊಂಡು ಬಂದಿದ್ದು, ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ, ಪರಿಸರ, ಪ್ರವಾಸೋದ್ಯಮ, ಶಿಕ್ಷಣ ಮುಂತಾದ ದೃಷ್ಟಿಗಳಿಂದ ತನ್ನ ಛಾಪನ್ನು ವೃದ್ಧಿಸಿಕೊಂಡು ಸಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಮೈಸೂರಿನ ವಿಸ್ತಾರವಾದ ರಸ್ತೆಗಳು, ಸುಂದರ ವೃತ್ತಗಳು, ಮೂಲಭೂತ ಸೌಕರ್ಯಗಳು, ಪಾರಂಪರಿಕ ಕಟ್ಟಡಗಳು, ಆಕರ್ಷಕ ಉದ್ಯಾನವನಗಳು, ಕಾರಂಜಿಗಳು, ಆಕರ್ಷಣೀಯ ದೇವಸ್ಥಾನಗಳು, ಚರ್ಚ್–ಮಸೀದಿಗಳು, ಕೆರೆಗಳು ಪ್ರಮುಖವಾಗಿವೆ. ಮೈಸೂರು ನಗರವನ್ನು ಮತ್ತು ಅದರ ಸೌಂದರ್ಯವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಮೂಲಕ ಆಧುನೀಕರಣಗೊಳಿಸುವಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಪ್ರಮುಖ ಪಾತ್ರ ವಹಿಸುತ್ತದೆ.

**ರಚನೆ**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು 'ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯಿದೆ' – 1987ರ ಕಲಂ 3ರ ನಿಬಂಧನೆಗಳಿಗೆ ಅನುಸಾರವಾಗಿ ಮೇ 16, 1988 ರಲ್ಲಿ ರಚಿಸಲಾಯಿತು. ಇದು ನಗರ ಪುರಸಭೆ ಮತ್ತು ಪಟ್ಟಣ ಪುರಸಭೆಯ ಪ್ರದೇಶಗಳನ್ನು ಒಳಗೊಂಡಂತೆ ಕಂದಾಯ ಗ್ರಾಮಗಳಿಗೆ ಪ್ರಾಧಿಕಾರದ ಕಾರ್ಯಚರಣೆಯ ಪ್ರದೇಶವನ್ನು ವಿಸ್ತರಿಸಲಾಗಿದೆ. ರಾಜ್ಯ ಸರ್ಕಾರವು ನಗರ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಸಿಸುವ ರಾಜ್ಯ ವಿಧಾನ ಸಭೆಯ ಎಲ್ಲಾ ಹಾಲಿ ಸದಸ್ಯರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಿಸುತ್ತದೆ. ಹಾಗೇಯೇ ಸ್ಥಳೀಯ ಪುರಸಭೆಯಿಂದ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುವುದು. ಮತ್ತು ಇವರ ಹೆಸರನ್ನು ಸರ್ಕಾರವು ಸಹ ಅನುಮೋದಿಸಬೇಕು. ಜೊತೆಗೆ ಸರ್ಕಾರದಿಂದ ನಾಲ್ವರು ಸದಸ್ಯರ ನಾಮನಿರ್ದೇಶನಕ್ಕೂ ಅವಕಾಶವನ್ನು ಕಲ್ಪಿಸಿದ್ದು, ಅವರಲ್ಲಿ ಒಬ್ಬರು ಮಹಿಳೆ ಮತ್ತು ಇನ್ನೊಬ್ಬರು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದಯಕ್ಕೆ ಸೇರಿದವರಾಗಿರಬೇಕು. ಇದರ ಜೊತೆಗೆ ಹೆಚ್ಚುವರಿಯಾಗಿ ಒಬ್ಬ ವೃತ್ತಿಪರ ವಾಸ್ತುಶಿಲ್ಪಿಯನ್ನು ಸಹ ಪ್ರಾಧಿಕಾರದ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ಈ ಸದಸ್ಯರುಗಳ ಜೊತೆಗೆ ಜಿಲ್ಲಾ ಉಪ ಆಯುಕ್ತರು, ಸ್ಥಳೀಯ ಯೋಜನಾ ಪ್ರಾಧಿಕಾರದ ಸದಸ್ಯರು, ಪಾಲಿಕೆ ಆಯುಕ್ತರು, ಜಿಲ್ಲಾ ಆರೋಗ್ಯಾಧಿಕಾರಿ, ಪೊಲೀಸ್ ಅಧಿಕಾರಿ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ನಗರ ವಿದ್ಯುತ್ ಕಂಪನಿಯ ಅಧಿಕಾರಿಗಳು ಸಹ ಸೇರಿರುತ್ತಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ತನ್ನದೇ ಆದ ಸುದೀರ್ಘ ಇತಿಹಾಸವನ್ನು ಹೊಂದಿದ್ದು, ನಗರ ಯೋಜನೆಗಾಗಿಯೇ ಸ್ಥಾಪಿತಗೊಂಡ ದೇಶದ ಎರಡನೇ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು (ಮೊದಲನೆಯದು, ಬಾಂಬೆ ನಗರ ಅಭಿವೃದ್ಧಿ ಸಂಸ್ಥೆ) ಇದು ಹೊಂದಿದೆ. 1898–99ರ ಅವಧಿಯಲ್ಲಿ ಜರುಗಿದ ಪ್ಲೇಗ್ ಮಹಾಮಾರಿ ಹಾಗೂ 1898ರ ಮೈಸೂರು ಅರಮನೆಯ ಬೆಂಕಿ ದುರಂತದ ಹಿನ್ನಲೆಯಲ್ಲಿ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೇತೃತ್ವದ ಅಂದಿನ ಮೈಸೂರು ಸರ್ಕಾರ ನಗರದ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಕೋನದ ಉದ್ದೇಶದಿಂದ ಒಂದು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸುವ ಆಶಯದೊಂದಿಗೆ 1904 ರಲ್ಲಿ 'ನಗರಾಭಿವೃದ್ಧಿ ಪ್ರತಿಷ್ಠಾನ ಮಂಡಳಿ'–CITB ಯನ್ನು ಸ್ಥಾಪಿಸಲಾಯಿತು. ಜೊತೆಗೆ ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡುವುದಾಗಿತ್ತು. ನಗರಾಭಿವೃದ್ಧಿ ಪ್ರತಿಷ್ಠಾನ ಮಂಡಳಿಯು ಪ್ಲೇಗ್ ಮಹಾಮಾರಿ ಹಾಗೂ ಬೆಂಕಿ ಅನಾಹುತದಿಂದ ಜೀವ–ಆಸ್ತಿ–ಪಾಸ್ತಿ ಕಳೆದುಕೊಂಡ ನಗರವನ್ನು ಪುನಶ್ಚೇತನಗೊಳಿಸುವ ಸಲುವಾಗಿ, ನಗರದ ನೈರ್ಮಲ್ಯ, ಆರೋಗ್ಯ, ಬಡವರಿಗೆ ಕನಿಷ್ಠ ದರದಲ್ಲಿ ನಿವೇಶನ, ಪಾಠಶಾಲೆ, ವಿದ್ಯಾರ್ಥಿನಿಲಯ, ಆಸ್ಪತ್ರೆ, ಉದ್ಯಾನವನ ಮುಂತಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವ ನೂತನ ಆಯಾಮದ ಧ್ಯೇಯದೊಂದಿಗೆ ವ್ಯವಸ್ಥಿತ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿತ್ತು. ಆದರೆ ಇದಕ್ಕೆ ಪೂರಕವಾಗಿ ಯಾವುದೇ ಖಾಸಗಿ ಸಹಭಾಗಿತ್ವ ದೊರಕದ ಕಾರಣ ಮಂಡಳಿಗೆ ಅಭಿವೃದ್ಧಿ ಕಾರ್ಯವು ಕಬ್ಬಿಣದ ಕಡಲೆಯಾಗಿ ಪರಿಣಮಿಸುತ್ತದೆ. ನಂತರ ಮೈಸೂರು ನಗರದ ಸರ್ವತೋಮುಖ ಹಾಗೂ ಕ್ರಿಯಾತ್ಮಕ ಯೋಜನಾಬದ್ಧ ಅಭಿವೃದ್ಧಿಯ ದೃಷ್ಟಿಯಿಂದ 1988ರಲ್ಲಿ ನಗರಾಭಿವೃದ್ಧಿ ಪ್ರತಿಷ್ಠಾನ ಮಂಡಳಿಯನ್ನು 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ' ಎಂದು ಮರು ನಾಮಕರಣ ಮಾಡಲಾಯಿತು. ನಂತರ ಇದು ತನ್ನದೇ ಆದ ಸದಸ್ಯರು, ಉದ್ಯೋಗಿಗಳನ್ನು ಮತ್ತು

ವಿವಿಧ ವಿಭಾಗಗಳನ್ನು ಒಳಗೊಂಡು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ.

ಈ ಪ್ರಾಧಿಕಾರವು ಮೈಸೂರು ನಗರವಾಸಿಗಳಿಗೆ ಮೂಲಭೂತ ಸೌಕರ್ಯಗಳ ಯೋಜನೆ, ಅಭಿವೃದ್ಧಿ ಸೇವೆಗಳನ್ನು ಮತ್ತು ನಿವೇಶನಗಳನ್ನು ಒದಗಿಸುವುದರ ಜೊತೆಗೆ ನಗರದಲ್ಲಿನ ಹಿಂದುಳಿದ ನಾಗರಿಕರ ವಸತಿ ಅಗತ್ಯಗಳನ್ನು ನೋಡಿಕೊಳ್ಳುವ ಸರ್ಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಜೊತೆಗೆ ನಗರದ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಮುಖವಾದ ಕಾರ್ಯನಿರ್ವಹಿಸುತ್ತಿದೆ. ಆ ಮೂಲಕ ಸಾರ್ವಜನಿಕರಿಗೆ ಉತ್ತಮ ಪ್ರವಾಸೋದ್ಯಮದ ಸೌಕರ್ಯಗಳು, ದೀರ್ಘಾವಧಿಯ ತಂಗುವಿಕೆಗಳು ಮತ್ತು ಪ್ರಾಯೋಗಿಕ ಪ್ರವಾಸೋದ್ಯಮಕ್ಕೆ ಪೂರಕವಾದ ಕೆಲವೊಂದು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವ ಮೂಲಕ ನಗರದ ಆರ್ಷಣೆಯನ್ನು ಹೆಚ್ಚಿಸುತ್ತಿದೆ. ಅಷ್ಟೇ ಅಲ್ಲದೇ ಕೇರಳ, ತಮಿಳುನಾಡು ಮತ್ತು ಬೆಂಗಳೂರಿನಂತಹ ನಗರಗಳಿಗೆ ಉತ್ತಮ ಸಂಪರ್ಕವನ್ನು ಕಲ್ಪಿಸಿಕೊಡುವ ಕೆಲಸವನ್ನು ನಿರ್ವಹಿಸುತ್ತಿದೆ. ಇಂತಹ ಸಮರ್ಥ ನಗರ ಸಾರಿಗೆ ಮತ್ತು ನಗರದ ವಿಸ್ತರಣೆಯಂತಹ ಸೇವೆಗಳು ಅಪೇಕ್ಷಿತ ಫಲಿತಾಂಶವನ್ನು ಸಾಧಿಸುವಲ್ಲಿ ಸಹಾಯ ಮಾಡಬಹುದು. ಅಷ್ಟೆ ಅಲ್ಲದೇ ಪ್ರಾಧಿಕಾರವು ನಗರದ ಅನುಕೂಲತೆಯ ದೃಷ್ಟಿಕೋನದಿಂದ ಪ್ರಸ್ತುತ ಕಾರ್ಯಾಚರಣೆಯಲ್ಲಿರುವ, ಪ್ರಾದೇಶಿಕ ವಿಮಾನ ನಿಲ್ದಾಣವನ್ನು [ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ] ಅಂತರರಾಷ್ಟ್ರೀಯ ದರ್ಜೆಗೆ ವರ್ಗಾಹಿಸಲು ಸಾಕಷ್ಟು ಉತ್ತೇಜನವನ್ನು ನೀಡುತ್ತಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮೈಸೂರು ನಗರದ 'ಕೇಂದ್ರ ನಗರ ಯೋಜನಾ ಪ್ರಾಧಿಕಾರ'ವಾಗಿ ಕಾರ್ಯನಿರ್ವಹಿಸುತ್ತದೆ. ಜೊತೆಗೆ ಇದು ನಗರದ ಸಾಮಾಜಿಕ ಮತ್ತು ಭೌತಿಕ ಮೂಲಸೌಕರ್ಯ ಸೇರಿದಂತೆ ಪ್ರತಿ ಪಟ್ಟಣವನ್ನು ಅಭಿವೃದ್ಧಿಪಡಿಸಲು ಅಪಾರ ಪ್ರಯತ್ನಗಳನ್ನು ನಿರ್ವಹಿಸುತ್ತಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ಮೈಸೂರು, ಬೋಗಾದಿ, ಹೂಟಗಳ್ಳಿ, ಶ್ರೀರಾಂಪುರ, ರಮ್ಮನಹಳ್ಳಿ, ಕಡಕೋಳ ಮತ್ತು ಹೊರವಲಯ ಗ್ರಾಮಗಳನ್ನು ಒಳಗೊಂಡಿದ್ದು, ನಗರಗಳ ಮೂಲಸೌಕರ್ಯಗಳ ಯೋಜನೆ ಹಾಗೂ ಯೋಜನಾಭಿವೃದ್ಧಿಗಳ ಅನುಷ್ಠಾನದ ಜವಾಬ್ದಾರಿಯನ್ನು ಹಾಗೂ ಪ್ರತಿ ಮನೆಯ ನಿರ್ವಹಣೆ ಮತ್ತು ಬೆಳವಣಿಗೆಗೆ ಪೂರಕವಾದ ಕಾರ್ಯವನ್ನು ನಿರ್ವಹಿಸುತ್ತಿದೆ.

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಘಟನೆಯ ಶ್ರೇಣಿ ವ್ಯವಸ್ಥೆಯನ್ನು ಈ ಕೆಳಗಿನ ರೇಖಾಚಿತ್ರದ ಮೂಲಕ ತಿಳಿಯಬಹುದು.**

ಆಯುಕ್ತರು

⇩

ಕಾರ್ಯದರ್ಶಿ

⇩

ಸಹ–ಕಾರ್ಯದರ್ಶಿ

⇩

ತಹಶೀಲ್ದಾರ್

⇩

ವ್ಯವಸ್ಥಾಪಕರು

⇩

ವಿಷಯ ನಿರ್ವಾಹಕರು

(ಬಡಾವಣೆವಾರು)

⇩

'ಡಿ' ಗ್ರೂಪ್ ನೌಕರರು

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಇಲಾಖೆಗಳು**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ಕಾರ್ಯನಿರ್ವಹಣೆಗಾಗಿ ವಿವಿಧ ಇಲಾಖೆಗಳನ್ನು ಒಳಗೊಂಡಿದ್ದು, ಮೈಸೂರು ನಗರದ

ಮೂಲಸೌಕರ್ಯಗಳನ್ನು ಸುಧಾರಿಸುವಲ್ಲಿ, ವಸತಿ ಯೋಗ್ಯ ನಿವೇಶನಗಳನ್ನು ಹಾಗೂ ವಾಣಿಜ್ಯ ಅಥವಾ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸುವಲ್ಲಿ ಪ್ರತಿಯೊಂದು ಇಲಾಖೆಯೂ ಮಹತ್ವದ ಪಾತ್ರವನ್ನು ವಹಿಸುತ್ತವೆ.

***ಭೂಸ್ವಾಧೀನ ಇಲಾಖೆ***

ಪ್ರಾಧಿಕಾರದ ಈ ಇಲಾಖೆಯು ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಮತ್ತು ಹೊಸ ಬಡಾವಣೆಗಳ ರಚನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸುತ್ತಿದೆ.

***ನಗರ ಯೋಜನಾ ಇಲಾಖೆ***

ಈ ಇಲಾಖೆಯು ಮುಡಾ–MUDA ದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತದೆ. 'ಮೈಸೂರು ನಗರದ ಯೋಜನಾ ಪ್ರಾಧಿಕಾರ'ವಾಗಿ ಕೆಲಸ ನಿರ್ವಹಿಸುತ್ತದೆ. ನಗರ ಯೋಜನಾ ಇಲಾಖೆಯು ಮೈಸೂರು ನಗರದ ಸಮಗ್ರ ಅಭಿವೃದ್ಧಿ ಕಾರ್ಯಗಳ ಮಹಾ ಯೋಜನೆಯ ತಯಾರಿ–ಅನುಷ್ಠಾನ ಹಾಗೂ ಕಾಲಕ್ಕೆ ತಕ್ಕಂತೆ ಪರಿಷ್ಕರಣೆ, ವಿನ್ಯಾಸ ಯೋಜನೆಗಳನ್ನು ಸಿದ್ಧಪಡಿಸುವುದು, ಲೇಔಟ್‌ಗಳು ಮತ್ತು ಸಮುದಾಯ ವಸತಿ ಯೋಜನೆಯಂತಹ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆಯನ್ನು ನೀಡುವ ಜವಾಬ್ದಾರಿಯನ್ನು ಹೊಂದಿದೆ. ಹಾಗೆಯೇ ಈ ಇಲಾಖೆಯು ಸಮುದಾಯ ಆಧಾರಿತ ಅಭಿವೃದ್ಧಿ ಕಾರ್ಯಗಳ ಭೂಬಳಕೆಯ ಬದಲಾವಣೆಯಲ್ಲಿಯೂ ಸಹ ಮೇಲ್ವಿಚಾರಣೆ ಮಾಡುತ್ತದೆ.

**ತಾಂತ್ರಿಕ ವಿಭಾಗ**

ಈ ವಿಭಾಗವು ಮೂಲಭೂತವಾಗಿ ಬಡಾವಣೆಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಮತ್ತು ಮೂಲಸೌಕರ್ಯ ಕಾಮಗಾರಿಗಳಿಗೆ ಸಂಬಂಧಿಸಿದುದಾಗಿದ್ದು, ಈ ಇಲಾಖೆಯು BWSSB ಕೈಗೆತ್ತಿಕೊಂಡ ನೀರು ಸರಬರಾಜು ಮತ್ತು ಭೂಗತ ಒಳಚರಂಡಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವುದರ ಜೊತೆಗೆ ಚೆಸ್ಕಾಂನಿಂದ ಕಾರ್ಯಗತಗೊಳಿಸಿದ ವಿದ್ಯುದ್ದೀಕರಣ ಕಾರ್ಯಗಳನ್ನು ಸಹ ಮೇಲ್ವಿಚಾರಣೆ ನಡೆಸುತ್ತದೆ.

***ಹಂಚಿಕೆ ಮತ್ತು ಸಾಮಾನ್ಯ ಆಡಳಿತ ಇಲಾಖೆ***

ಈ ಇಲಾಖೆಯು ಸೈಟ್‌ಗಳು, ಅಂಗಡಿಗಳು ಮತ್ತು ಮನೆಗಳ ಹಂಚಿಕೆ, ಆಸ್ತಿ ತೆರಿಗೆ, ಮೌಲ್ಯಮಾಪನ, ಗುತ್ತಿಗೆ ಹಣ ಮತ್ತು ಅಂಗಡಿ ಬಾಡಿಗೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಸಹ ನಿರ್ವಹಿಸುತ್ತದೆ. ಜೊತೆಗೆ ಸಾಮಾನ್ಯ ಆಡಳಿತಾತ್ಮಕ ವಿಷಯಗಳು ಹಾಗೂ ಸಿಬ್ಬಂದಿ ನಿರ್ವಹಣೆಯ ಜವಾಬ್ದಾರಿಯನ್ನು ಸಹ ಈ ಇಲಾಖೆಗೆ ವಹಿಸಲಾಗಿದೆ.

***ಹಣಕಾಸು ಇಲಾಖೆ***

ಈ ಇಲಾಖೆಯು ಪ್ರಾಧಿಕಾರಕ್ಕೆ ಬಾಕಿಗಳ ಬೇಡಿಕೆ, ಸಂಗ್ರಹಣೆ ಮತ್ತು ಬಾಕಿಯನ್ನು ನೋಡಿಕೊಳ್ಳುತ್ತದೆ. ಇದರ ಜೊತೆಗೆ ವಿವಿಧ ಹಣಕಾಸಿನ ವಿಷಯಗಳ ಕುರಿತು ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡುತ್ತದೆ ಹಾಗೂ ಪ್ರಾಧಿಕಾರದ ಖಾತೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಹ ನಿರ್ವಹಿಸುತ್ತದೆ.

***ಕಾನೂನು ಇಲಾಖೆ***

ಪ್ರಾಧಿಕಾರದ ಹಿತಾಸಕ್ತಿಯನ್ನು ಸಂರಕ್ಷಿಸುವುದು ಕಾನಾನು ಶಾಖೆಯ ಮೂಲಭೂತ ಕರ್ತವ್ಯವಾಗಿದೆ. ಈ ಇಲಾಖೆಯು ನ್ಯಾಯಾಲಯಗಳಲ್ಲಿ ಪ್ರಾಧಿಕಾರದ ವಿರುದ್ಧದ ಪ್ರಕರಣಗಳನ್ನು ಮತ್ತು ವ್ಯಾಜ್ಯಗಳನ್ನು ನಿರ್ವಹಿಸುತ್ತವೆ. ಜೊತೆಗೆ ಪ್ರಾಧಿಕಾರಕ್ಕೆ ವಿವಿಧ ಕಾನೂನು ವಿಷಯಗಳಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತದೆ.

***ಸಾರ್ವಜನಿಕ ಸಂಪರ್ಕ ಇಲಾಖೆ***

ಈ ಇಲಾಖೆಯು ಸಾರ್ವಜನಿಕರಿಂದ ವಿವಿಧ ಉದ್ದೇಶಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸುತ್ತದೆ. ನಂತರ ಅವುಗಳ ಅಗತ್ಯ ಕ್ರಮಕ್ಕಾಗಿ ವಿವಿಧ ಇಲಾಖೆಗಳಿಗೆ ರವಾನಿಸುತ್ತದೆ. ಅಷ್ಟೇ ಅಲ್ಲದೆ

ಸಾರ್ವಜನಿಕ ಸಂಪರ್ಕ ಕಚೇರಿಯು ಮಾಧ್ಯಮ ವಿಷಯಗಳನ್ನು ನಿರ್ವಹಿಸುತ್ತದೆ. ಇವುಗಳಲ್ಲಿ ಪತ್ರಿಕಾ ಟಿಪ್ಪಣಿಗಳ ಪ್ರಕಟಣೆ, ಜಾಹೀರಾತುಗಳು, ಮತ್ತು ಸಂಸ್ಥೆಯ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುವ ವರದಿಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆಗಳು ಮತ್ತು ಸ್ಪಷ್ಟೀಕರಣಗಳು ಸೇರಿಕೊಂಡಿವೆ.

***ಲೆಕ್ಕ ಶಾಖೆ***

ಈ ವಿಭಾಗವು ನಗರಾಭಿವೃದ್ಧಿ ಪ್ರಾಧಿಕಾರದ ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಈ ಮೂಲಕ ಕೆಲಸ–ಕಾರ್ಯಗಳನ್ನು ಕಾರ್ಯಗತಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸುತ್ತದೆ. ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕಮತ್ತು ಆಡಳಿತಾಧಿಕಾರಿಯಾಗಿದ್ದು, ಪ್ರಾಧಿಕಾರದ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ವಿವಿಧ ಇಲಾಖೆಗಳನ್ನು ನಿಯಂತ್ರಿಸುವ ನಿರ್ದೇಶಿಸುವ ಮತ್ತು ಸಮನ್ವಯ ಗೊಳಿಸುವ ಮೂಲಭೂತ ಜವಾಬ್ದಾರಿಯನ್ನು ಹೊಂದಿರುತ್ತಾರೆ.

***ತೋಟಗಾರಿಕಾ ಶಾಖೆ***

ಈ ವಿಭಾಗವು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ನಗರ ಪ್ರದೇಶಗಳಲ್ಲಿ ಉದ್ಯಾನವನ ಗಳನ್ನು ಅಭಿವೃದ್ಧಿಪಡಿಸುವ ಮತ್ತು ಅವುಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡುವ ಕಾರ್ಯವನ್ನು ಈ ಶಾಖೆ ಮಾಡುತ್ತದೆ.

***ಗಣಕಶಾಖೆ***

ಗಣಕಶಾಖೆಯು ಪ್ರಾಧಿಕಾರದ ಕೆಲಸಗಳ ಗಣಕೀಕರಣ ಮತ್ತು ದಾಖಲೆಗಳ ಗಣಕೀಕರಣ ಚಟುವಟಿಕೆಗಳನ್ನು ನಿರ್ವಹಿಸುತ್ತದೆ.

***ನಿವೇಶನ ಅಥವಾ ಅರ್ಜಿ ಶಾಖೆ***

ಈ ವಿಭಾಗವು ನಿವೇಶನಗಳ ಹಂಚಿಕೆ, ಮಂಜೂರಾತಿ ಪತ್ರ, ಸ್ವಾಧೀನಪತ್ರ, ಖಾತಾ ಪತ್ರ ಹಾಗೂ ಕ್ರಯಪತ್ರಗಳನ್ನು ವಿತರಿಸುವ ಕಾರ್ಯಗಳನ್ನು ನಿರ್ವಹಿಸುತ್ತದೆ.

**ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯಗಳು**

ನಗರಾಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಡಿ ನಗರಾಭಿವೃದ್ಧಿ ಪ್ರದೇಶಗಳೆಂದು ನಿರ್ಧಿಷ್ಟಪಡಿಸಲಾದ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಭೌತಿಕ ಅಭಿವೃದ್ಧಿಯ ಸಮಗ್ರ ಯೋಜನೆಯ ಅನುಷ್ಠಾನವನ್ನು ಉತ್ತೇಜಿಸುವ ಕಾರ್ಯ ನಗರಾಭಿವೃದ್ಧಿ ಪ್ರಾಧಿಕಾದ ಧ್ಯೇಯವಾಗಿರುತ್ತದೆ.

- ನಿರ್ಧಿಷ್ಟ ಅಥವಾ ಅಧಿಸೂಚಿತ ಪ್ರದೇಶಗಳಿಗೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು.
- ನಗರಗಳ ಅಭಿವೃದ್ಧಿಗೆ ಸಂಬಂಧಿಸಿದಂತಹ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಲಾಗಿದೆಯೇ? ಎಂದು ಖಚಿತಪಡಿಸಿಕೊಳ್ಳುವುದು.
- ಕೊಳಗೇರಿ ಮತ್ತು ವಸತಿ ನಿವಾಸಿಗಳ ಅಭಿವೃದ್ಧಿಯಂತಹ ನಗರ ಪ್ರದೇಶ ಅಭಿವೃದ್ಧಿ ಉಪಕ್ರಮಗಳ ರಚನೆ ಮತ್ತು ಅನುಷ್ಠಾನ.
- ಅಸ್ತಿತ್ವದಲ್ಲಿರುವ ನಗರ ಪ್ರದೇಶಗಳ ಸುಧಾರಣೆಗಾಗಿ ***'ಸ್ಥಳೀಯ ಪ್ರದೇಶ ಯೋಜನೆಗಳನ್ನು*** ಜಾರಿಗೊಳಿಸುವುದು.
- ನಗರ ಪ್ರದೇಶಗಳಲ್ಲಿ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವುದು ಮತ್ತು ಸಂಬಂಧಿಸಿದ ಕಾನೂನುಗಳನ್ನು ಸುಧಾರಿಸುವುದು.
- ನಗರ ಪ್ರದೇಶಗಳ ಸರ್ವೋತ್ತೋಮುಖ ಅಭಿವೃದ್ಧಿಯ ದೃಷ್ಟಿಕೋನದಿಂದಾಗಿ 'ಸಾರಿಗೆ ಆಧಾರಿತ ಅಭಿವೃದ್ಧಿ'ಯನ್ನು ಉತ್ತೇಜಿಸುವುದು.
- ನಗರ ಪ್ರದೇಶಗಳಲ್ಲಿನ ನಿವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾದಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

**ಯೋಜನಾ ಕಾರ್ಯಗಳು**

- ಪ್ರಾಧಿಕಾರವು ಸ್ಥಳೀಯ ಯೋಜನಾ ಪ್ರದೇಶಕ್ಕೆ ***'ಮಹಾಯೋಜನೆ'*** ಯನ್ನು ರೂಪಿಸುವುದು.

ಹಾಗೂ ಮಹಾಯೋಜನೆಗೆ ಅನುಗುಣವಾಗಿ ***'ಅಭಿವೃದ್ಧಿ ನಕ್ಷೆಯನ್ನು'*** ತಯಾರಿಸುವುದು

- ಸಮುದಾಯದ ಅಭಿವೃದ್ಧಿಯ ದೃಷ್ಟಿಕೋನದಿಂದ ಸಮೂಹ ವಸತಿಗಾಗಿ ***'ಅಭಿವೃದ್ಧಿ ನಕ್ಷೆ' ಹಾಗೂ 'ಬಡಾವಣೆ ನಕ್ಷೆ'*** ಯನ್ನು ಅನುಮೋದಿಸುವುದು.
- ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವಂತಹ ಕಟ್ಟಡಗಳ ನಕ್ಷೆಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವುದು.
- 1961ರ ಕರ್ನಾಟಕ ನಗರಾಭಿವೃದ್ಧಿ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ಅಡಿಯಲ್ಲಿ ಇತರೆ ಶಾಸನಬದ್ಧ ಕಾರ್ಯಗಳನ್ನು ನಿರ್ವಹಿಸುವುದು.

**ಅಭಿವೃದ್ಧಿ ಕಾರ್ಯಗಳು**

- ನಿರ್ಗತಿಕ ಅಥವಾ ವಸತಿ ರಹಿತರಿಗೆ ನಿವೇಶನಗಳ ಅವಕಾಶವನ್ನು ಕಲ್ಪಿಸಿಕೊಡುವುದು.
- ವಾಣಿಜ್ಯ ಮತ್ತು ಕೈಗಾರಿಕಾ ನಿವೇಶನಗಳ ಅಭಿವೃದ್ಧಿ ಕೈಗೊಳ್ಳುವುದು.
- ನಾಗರಿಕರಿಗೆ ಸಂಬಂಧಿಸಿದಂತೆ ನಿವೇಶನಗಳ ಸೌಲಭ್ಯವನ್ನು ಒದಗಿಸಿರುವುದು.
- ಪರಿಸರದ ಹಿತದೃಷ್ಟಿ ಮತ್ತು ನಗರದ ಸೌಂದರ್ಯವನ್ನು ಇಮ್ಮಡಿಗೊಳಿಸುವ ನಿಟ್ಟಿನಲ್ಲಿ ಉದ್ಯಾನವನ ಮತ್ತು ಆಟದ ಮೈದಾನಗಳ ಅಭಿವೃದ್ಧಿ ಕಾರ್ಯ.
- ಆರ್ಥಿಕವಾಗಿ ಹಿಂದುಳಿದವರಿಗೆ, ಕಡಿಮೆ ಮತ್ತು ಮಧ್ಯಮ ವರಮಾನದ ವರ್ಗದವರಿಗೆ ಹಾಗೂ ಅಧಿಕ ವರಮಾನದ ವರ್ಗದ ನಗರ ನಿವಾಸಿಗಳಿಗೆ ಮಾದರಿ ಮನೆಗಳ ನಿರ್ಮಾಣ
- ನಗರ ನಿವಾಸಿಗಳ ಹಿತಾದೃಷ್ಟಿಯಿಂದ ಪ್ರಧಾನವಾದ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು.
- ಸಾಮೂಹಿಕ ವಸತಿ ಯೋಜನೆಗಳ ಅಡಿಯಲ್ಲಿ ನಗರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಂಗವಿಕಲರಿಗೆ ಮಾದರಿ ಮನೆಗಳನ್ನು ನಿರ್ಮಾಣ ಮಾಡುವುದು.

**ನಗರಾಭಿವೃದ್ಧಿ ಪ್ರಾಧಿಕಾರದ ಸವಾಲುಗಳು**

ಪ್ರಾಧಿಕಾರದ ಮುಂದಿರುವ ಪ್ರಮುಖ ಸವಾಲುಗಳೆಂದರೆ:

- ನಗರ ಪ್ರದೇಶದ ನಿವಾಸಿಗಳಿಗೆ ವಸತಿ ಸೌಲಭ್ಯಗಳ ಅಗತ್ಯತೆಗಳನ್ನು ಉತ್ತಮ ರೀತಿಯಲ್ಲಿ ಪೂರೈಸುವುದು.
- ನಗರ ನಿವಾಸಿಗಳಿಗೆ ಶುದ್ಧಕುಡಿಯುವ ನೀರಿನ ಸೇವೆಯನ್ನು ಪೂರೈಸುವುದು.
- ನಗರ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವುಗಳ ಉಪಕ್ರಮಗಳ ಮೇಲಿನ ಹೂಡಿಕೆಯ ಹೆಚ್ಚಳ.
- ನಗರ ಪ್ರದೇಶಗಳಲ್ಲಿರುವಂತಹ ನೈರ್ಮಲ್ಯ ಸಮಸ್ಯೆಗಳನ್ನು ಪರಿಹರಿಸುವುದು. ಹಾಗೂ ನಗರ ನಿವಾಸಿಗಳಿಗೆ ಉತ್ತಮ ಆರೋಗ್ಯಕರ ವಾತಾವರಣವನ್ನು ಕಲ್ಪಿಸಿಕೊಡುವುದು.

**ಉಪಸಂಹಾರ**

***'ಸಾಂಸ್ಕೃತಿಕ ರಾಜಧಾನಿ'*** ಮೈಸೂರು ನಗರದ ವೈಭವವನ್ನು ವೃದ್ಧಿಸುವಲ್ಲಿ ಮತ್ತು ಸಾರ್ವಜನಿಕರಿಗೆ ಮೂಲಭೂತವಾದ ಮೂಲಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ***ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು*** ಅತ್ಯಂತ ಗಣನೀಯವಾದ ಕಾರ್ಯವನ್ನು ನಿರ್ವಹಿಸುತ್ತಿದೆ. ಪ್ರಾಧಿಕಾರವು ಹಲವಾರು ಅಭಿವೃದ್ಧಿ ಉಪಕ್ರಮಗಳ ಯಶಸ್ಸನ್ನು ಯೋಜಿಸಿ ಸಾಧಿಸಿದ್ದು, ಇದರ ಜೊತೆಗೆ ಇನ್ನು ಹತ್ತು ಹಲವು ಹೊಸ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಿದೆ. ಸಿಡಿಪಿ – 2031ರ ಕರಡು ರಚನೆಗೆ ಸರ್ಕಾರವು ಅನುಮೋದನೆ ನೀಡಿದ್ದು, ಮುಂದಿನ ಇಪ್ಪತ್ತು ವರ್ಷಗಳ ಪ್ರಗತಿಗೆ ಟಿಪ್ಪಣಿಯನ್ನು ರಚಿಸಿ, ಆ ಮೂಲಕ ಸ್ಥಳೀಯ

ಗುಂಪುಗಳು ಮತ್ತು ಘಟಕಗಳು ತಮ್ಮ ಮೀಸಲಾತಿ ಹಾಗೂ ಆಲೋಚನೆಗಳನ್ನು ಪ್ರಾಧಿಕಾರದ ಅಧಿಕಾರಿಗಳ ಗಮನಕ್ಕೆ ತರುವಂತಹ ಸೌಲಭ್ಯವನ್ನು ಕಲ್ಪಿಸಿಕೊಡುವ ಪ್ರಯತ್ನವನ್ನು ಮಾಡುತ್ತಿದೆ. ಅಂತಿಮವಾಗಿ, ಪ್ರಾಧಿಕಾರವು ಕ್ರಿಯಾಚಲನೆ ಯೋಜನೆ ಮತ್ತು ಅಗತ್ಯ ಆಡಳಿತಾತ್ಮಕ ಬದಲಾವಣೆ ಮೂಲಕ ಪರಿಣಾಮಕಾರಿಯಾಗಿ ಜನರ ಆಶಯಗಳು ಮತ್ತು ನಿರೀಕ್ಷೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಮೈಸೂರು ನಗರ ಸುಸ್ಥಿರ ಅಭಿವೃದ್ಧಿಗೆ ಒಂದು ಮಾದರಿ ಸ್ವರೂಪವಾಗಿ ರೂಪುಗೊಳ್ಳುವುದು ಅಗತ್ಯ ಮತ್ತು ಅನಿವಾರ್ಯ.

**ಪರಾಮರ್ಶನ ಗ್ರಂಥಗಳು**


- ಗೋಪಾಲ್. ಆರ್. (ಸಂ.) (2010). ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ. ಪು.ಸಂ–12
- *ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (2023, ಜೂನ್ 27). ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ.*

  https://www.mudamysore.gov.in/about-us/
- *ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಡಿ ಕಾರ್ಯ ನಿರ್ವಹಿಸುವ ಇಲಾಖೆಗಳು. (2023, ಜೂನ್ 19).*

  https://www.mudamysore.gov.in/about-us/departments/
- *74th Amendment and Municipalities in India.* https://mohua.gov.in/upload/uploadfiles/files/74th_CAA13.pdf.
- Jayamani, M. and Dr.Asima Nusrath. (2011). Booming Real Estate Markets, Changing Urban Design and Endangered Heritage Status: A Case Study of Mysore Urban Area. *Institute of Town Planners, India Journal* 8.(2), 59 - 73
- Kamalika Banerjee and Sib SankarMal. (2022). *Role of Urban Development Authorities in Local Governance***.** Insta publishing House.
- Mysore Urban Development Authority (2011) Comprehensive Development Plan, Mysore Urban Development Authority, Mysore.